<u>2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ</u>

<u>ಸತ್ರ ಮೊಕದ್ದಮೆ ಸಂಖ್ಯೆ: 14/2026</u>

ಪಿ.ಡಬ್ಲುಃ 2 ಸಿಡಬ್ಲುಃ 10

| | | |
|---|---|---|
| ಸಾಕ್ಷಿಯ ಹೆಸರು | : | ರಾಮಣ್ಣ |
| ತಂದೆಯ ಹೆಸರು | : | ಈರಣ್ಣ |
| ವಯಸ್ಸು | : | 56 ವರ್ಷ |
| ವೃತ್ತಿ | : | ವ್ಯವಸಾಯ |
| ವಾಸಸ್ಥಳ | : | ಮುಷ್ಟೂರು |

<u>ಸತ್ಯಪ್ರತಿಜ್ಞೆ ಮಾಡಿದ ದಿನಾಂಕಃ 03.08.2026.</u>

<u>ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ-</u>

1) ಮೃತ ಲಕ್ಷ್ಮಿ ಅಲಿಯಾಸ್ ಹೇಮಾವತಿ ನನ್ನ ಅಣ್ಣನ ಮಗಳು. ಆರೋಪಿಯು ಮೃತಳ ಗಂಡನಾಗಬೇಕು. ಆತ ಕಂಪ್ಲಿಯವನು. ಚಾಸಾ-1 ಚಾಸಾ-25 ನನ್ನ ಅಣ್ಣನ ಮಕ್ಕಳಾಗಬೇಕು. 2020 ಕ್ಕಿಂತ 15 ವರ್ಷದ ಹಿಂದೆ ಆರೋಪಿಯ ಮದುವೆ ಮೃತಳ ಜೊತೆ ಆಗಿತ್ತು. ಅವರಿಗೆ 3 ಜನ ಮಕ್ಕಳು ಇದ್ದಾರೆ. ಅವರುಗಳು ಗಂಗೋತ್ರಿ, ಪಾಂಡುರಂಗ, ನಾಗೇಶ. ಚಾಸಾ-13 ಆರೋಪಿಯ ತಾಯಿ. ಚಾಸಾ-14 ಆರೋಪಿಯ ದೊಡ್ಡಮ್ಮ. ಆರೋಪಿಯ ಮನೆಯಲ್ಲಿ ಚಾಸಾ-13, 14 ಮತ್ತು ನನ್ನ ತಂಗಿ, ಮಕ್ಕಳು ವಾಸವಿದ್ದರು. ನನಗೆ ಚಾಸಾ-17 ಮತ್ತು 18 ರವರ ಪರಿಚಯವಿದೆ. ಅವರು ಕಂಪ್ಲಿಯ ವಾಸಿಗಳಾಗಿದ್ದಾರೆ.

2) ನನ್ನ ಅಣ್ಣನ ಮಗಳು ಈಗ ಮರಣ ಹೊಂದಿದ್ದಾಳೆ. ಅವಳನ್ನು ಆರೋಪಿಯು ನವಂಬರ್ 2020 ರಲ್ಲಿ ತನ್ನ ಮನೆಯ ಅಡುಗೆ ಮನೆಯಲ್ಲಿ ಮಚ್ಚಿನಿಂದ ತಲೆಗೆ, ಹಣೆಗೆ ಮತ್ತು ತುಟಿಯ ಮೇಲೆ ಹಲ್ಲೆ ಮಾಡಿ ಕೊಲೆ ಮಾಡಿದ್ದ. ಚಾಸಾ-12 ರವರು ಚಾಸಾ-1 ರವರಿಗೆ ಫೋನ್ ಮಾಡಿ ನನ್ನ ಅಣ್ಣನ ಮಗಳು ಕೊಲೆಯಾದ ಸಂಗತಿಯನ್ನು ತಿಳಿಸಿದ್ದ. ಚಾಸಾ-1 ರವರಿಂದ ನನಗೆ ಸದರಿ ಸಂಗತಿ ರಾತ್ರಿ 12 ಗಂಟೆಗೆ ಗೊತ್ತಾಗಿತ್ತು. ನಂತರ ನಾನು ಚಾಸಾ-9 ಮತ್ತು 1 ಸೇರಿಕೊಂಡು ಆರೋಪಿಯ ಮನೆಗೆ ಹೋದೆವು. ಆರೋಪಿಯ ಮನೆಯ ಅಡುಗೆ ಮನೆಯಲ್ಲಿ ಮೃತಳ ಶವ ಬಿದ್ದಿತ್ತು. ಅವಳ ತಲೆಯ ಮಧ್ಯ ಭಾಗದಲ್ಲಿ, ಮೂಗಿನ ಹತ್ತಿರ ಮತ್ತು ಕುತ್ತಿಗೆಯ ಬಳಿ ಮಚ್ಚಿನ ಏಟು ಬಿದ್ದಿದ್ದು ಕಂಡು ಬಂದಿತ್ತು.

**3)** ನಾನು ಆರೋಪಿಯ ಮನೆಗೆ ಹೋಗಿದ್ದ ಸಮಯದಲ್ಲಿ ಆರೋಪಿಯ ತಾಯಿ ಮತ್ತು ಸಾಕು ತಾಯಿಯಾದ ಚಾಸಾ-13 ಮತ್ತು 14 ಮತ್ತು ಆರೋಪಿಯ ಮಕ್ಕಳು ಇದ್ದರು. ಆರೋಪಿಯು ಮನೆಯಲ್ಲಿ ಇರಲಿಲ್ಲ. ಆ ದಿವಸ ರಾತ್ರಿ ಆರೋಪಿ ಹಾಗು ಮೃತಳ ನಡುವೆ ಜಗಳ ಆಗಿತ್ತು ಎಂದು ಮತ್ತು ಸದರಿ ಜಗಳ ವಿಕೋಪಕ್ಕೆ ಹೋಗಿ ಆರೋಪಿಯು ಮಚ್ಚಿನಿಂದ ಮೃತಳ ಮೇಲೆ ಹಲ್ಲೆ ಮಾಡಿ ಕೊಲೆ ಮಾಡಿದ್ದ ಎಂದು ಚಾಸಾ-13 ಮತ್ತು 14 ರವರು ನನಗೆ ತಿಳಿಸಿದ್ದರು. ಚಾಸಾ-13 ಮತ್ತು 14 ರವರು ಜಗಳ ಬಿಡಿಸಲು ಹೋದಾಗ ಆರೋಪಿಯು ಅವರಿಗೂ ಸಹ ಹಲ್ಲೆ ಮಾಡಿದ್ದ ಎಂದು ಅವರು ತಿಳಿಸಿದ್ದರು ಮತ್ತು ಅವರ ಕೈಗಳಿಗೆ ಗಾಯ ಆಗಿದ್ದ ಬಗ್ಗೆ ಸಹ ತಿಳಿಸಿದ್ದರು. ಆರೋಪಿಯು ನಂತರ ಕಾಯಿಪಲ್ಲೆ ರಾಜು ಚಾಸಾ-17 ರವರ ಮೇಲೆಯೂ ಸಹ ಹಲ್ಲೆ ಮಾಡಿದ ಸಂಗತಿ ನನಗೆ ಗೊತ್ತಾಗಿತ್ತು.

**4)** ನಾನು ಪೊಲೀಸರ ಸಹಾಯದಿಂದ ಮೃತಳ ಮೃತ ದೇಹವನ್ನು ಕಂಪ್ಲಿ ಸರ್ಕಾರಿ ಆಸ್ಪತ್ರೆಗೆ ಸಾಗಿಸಿದ್ದೆ. ಆರೋಪಿಯು ಮೃತಳ ಶೀಲದ ಬಗ್ಗೆ ಸಂಶಯ ವ್ಯಕ್ತಪಡಿಸುತ್ತಿದ್ದ ಮತ್ತು ಚಾಸಾ-17 ಈತನಿಗೆ ಮೃತಳ ಜೊತೆ ಸಂಬಂಧ ಇತ್ತು ಎಂದು ಸಂಶಯ ವ್ಯಕ್ತಪಡಿಸಿ ಅವಳನ್ನು ಕೊಲೆ ಮಾಡಿದ್ದ ಮತ್ತು ಚಾಸಾ-17 ರವರ ಮೇಲೆಯೂ ಸಹ ಕೊಲೆ ಪ್ರಯತ್ನ ಮಾಡಿದ್ದ.

**5)** ನನ್ನ ಅಣ್ಣನ ಮಗಳ ಕೊಲೆಯಾಗುವುದಕ್ಕಿಂತ 6 ತಿಂಗಳ ಮೊದಲು ಮೃತಳನ್ನು ನಮ್ಮ ಮನೆಗೆ ಕರೆದುಕೂಂಡು ಬಂದಿದ್ದೆ. ಆರೋಪಿಯು ಮೃತಳ ಮೇಲೆ ಜಗಳ ಮಾಡುತ್ತಿದ್ದರಿಂದ ನಮ್ಮ ಮನಗೆ ಕರೆದುಕೊಂಡು ಬಂದಿದ್ದೆ. ನಂತರ ಆರೋಪಿಯು ನಮ್ಮ ಮನೆಗೆ ಬಂದು ತನ್ನ ಹೆಂಡತಿಯನ್ನು ಚೆನ್ನಾಗಿ ನೋಡಿಕೊಳ್ಳುತ್ತೇನೆ ಎಂದು ಹೇಳಿ ನಮ್ಮ ಮನೆಯಿಂದ ಪುನಃ ತನ್ನ ಮನಗೆ ಕರೆದುಕೊಂಡು ಹೋಗಿದ್ದ. ಈ ರೀತಿ ಆರೋಪಿಯು ಮೃತಳನ್ನು ತನ್ನ ಮನೆಗೆ ಕರೆದುಕೊಂಡು ಹೋದ 15 ದಿವಸಗಳ ನಂತರ ಅವಳನ್ನು ಕೊಲೆ ಮಾಡಿದ್ದ. ಈ ಎಲ್ಲಾ ಸಂಗತಿಗಳ ಬಗ್ಗೆ ಪೊಲೀಸರು ನನ್ನ ಹೇಳಿಕೆಯನ್ನು ಕಂಪ್ಲಿ ಆಸ್ಪತ್ರೆಯಲ್ಲಿ ಪಡೆದುಕೊಂಡಿದ್ದರು.

<u>ಪಾಟೀಸವಾಲು ಆರೋಪಿ ಪರವಾಗಿ ಶ್ರೀ ಎನ್.ಬಿ.ಕೆ ವಕೀಲರಿಂದಃ</u>

6) ಆರೋಪಿಯು ಒಳ್ಳೆ ವ್ಯಕ್ತಿ ಎಂದು ನನ್ನ ಅಣ್ಣನ ಮಗಳಿಗೆ ಮದುವೆ ಮಾಡಿಕೊಟ್ಟಿದ್ದೆವು ಎಂದರೆ ಸರಿ. ಮೃತಳು ಮತ್ತು ಆರೋಪಿಗೆ 3 ಜನ ಮಕ್ಕಳು ಇದ್ದಾರೆ ಎಂದರೆ ಸರಿ. ಅವರುಗಳಿಗೆ ಈಗ 15 ವರ್ಷ, 12 ವರ್ಷ ಮತ್ತು 5 ವರ್ಷ ಎಂದರೆ ಸರಿ. ಅವರುಗಳು ಶಾಲೆಗೆ ಹೋಗುತ್ತಿದ್ದಾರೆ ಎಂದರೆ ಸಾಕ್ಷಿಯು ಹೆಣ್ಣು ಮಗಳು ಶಾಲೆಗೆ ಹೋಗುತ್ತಿಲ್ಲ ಎಂದು ಮತ್ತು ಇಬ್ಬರು ಗಂಡು ಮಕ್ಕಳು ಶಾಲೆಗೆ ಹೋಗುತ್ತಿದ್ದಾರೆ ಎಂದು ಹೇಳಿದ್ದಾರೆ. ಆರೋಪಿಯ ಮನೆಯಲ್ಲಿ ಈಗ ಚಾಸಾ-13, 14 ಮತ್ತು ಆರೋಪಿಯ ಮಕ್ಕಳು ವಾಸವಿದ್ದಾರೆ ಎಂದರೆ ಸರಿ. ಆರೋಪಿ ತನ್ನ ಹೆಂಡತಿಯೊಂದಿಗೆ ವ್ಯವಸಾಯ ಮಾಡುತ್ತಿದ್ದ ಎಂದರೆ ಸರಿ. ಆರೋಪಿಯು ವ್ಯವಸಾಯದಿಂದ ಬಂದ ಆದಾಯದಿಂದ ಮನೆ ನಡೆಸಿಕೊಂಡು ಹೋಗುತ್ತಿದ್ದ ಎಂದರೆ ಸರಿ.

7) ಆರೋಪಿಯ ಮನೆಯಲ್ಲಿ ಒಟ್ಟು 3 ಕೋಣೆಗಳು ಇವೆ. ಮೃತಳ ಮದುವೆಯಾದ ಸ್ವಲ್ಪ ದಿವಸಗಳ ನಂತರ ಅರ್ದ ಎಕರೆ ಜಮೀನನ್ನು ಕೊಟ್ಟಿದ್ದೆವು ಎಂದರೆ ಸರಿ. ಸದರಿ ಜಮೀನು ಮೃತಳ ಹೆಸರಿನಲ್ಲಿ ಇದೆ ಎಂದರೆ ಸರಿ. ಆರೋಪಿಯು ಸದರಿ ಜಮೀನನ್ನು ತನ್ನ ಹೆಸರಿಗೆ ಮಾಡುವಂತೆ ಮೃತಳನ್ನು ಬಲವಂತ ಮಾಡುತ್ತಿದ್ದ. ನಾನು ಈಗ ನೋಡುತ್ತಿರುವ ಫೋಟೊಗಳು ಆರೋಪಿಯ ಅಡುಗೆ ಮನೆಯ ಫೋಟೊಗಳಾಗಿವೆ ಎಂದರೆ ಸರಿ. ಅದರಲ್ಲಿ ರಕ್ತದ ಕಲೆ ಮತ್ತು ಸಜ್ಜೆಯ ಮೇಲೆ ಸಾಮಾನುಗಳು ಕಾಣುತ್ತಿವೆ ಎಂದರೆ ಸರಿ. ಸಾಕ್ಷಿಗೆ ಗುರುತಿಸಿದ ಫೋಟೊಗಳನ್ನು ಈಗಾಗಲೆ ನಿಪಿ-3 ರಿಂದ 5 ಎಂದು ಗುರುತಿಸಲಾಗಿವೆ. ಸದರಿ ಫೋಟೊಗಳನ್ನು ಆರೋಪಿಯ ಪರ ವಕೀಲರು ಸಾಕ್ಷಿಗೆ ತೋರಿಸಿರುತ್ತಾರೆ. ಸದರಿ ಫೋಟೊಗಳಲ್ಲಿ ಕಾಣುತ್ತಿರುವ ಅಡುಗೆ ಮನೆಯ ಸಜ್ಜೆ ಮೇಲೆ ಇದ್ದ ಕೆಲವು ಭಾರವಾದ ಸಾಮಾನುಗಳು ಮೃತಳ ಮೇಲೆ ಬಿದ್ದು ಅವಳು ಗಾಯಗೊಂಡು ಮರಣ ಹೊಂದಿದ್ದಳು ಎಂದರೆ ಸರಿಯಲ್ಲ.

8) ಆರೋಪಿಯು ಮೃತಳನ್ನು ಕೊಲೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿ. ಆರೋಪಿಗೆ

ಮೃತಳ ಹೆಸರಿನಲ್ಲಿದ್ದ ಜಮೀನನ್ನು ಕೊಡಬೇಕಾಗುತ್ತದೆ ಎಂಬ ಕಾಣದಿಂದಾಗಿ ನಾನು ಆರೋಪಿಯ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ಚಾಸಾ-17 ರವರ ಮನೆಗೆ ಹೋಗಿ ಆತನ ಮೇಲೆ ಹಲ್ಲೆ ಮಾಡಿ ಕೊಲೆ ಪ್ರಯತ್ನ ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ-13 ಮತ್ತು 14 ರವರು ನನಗೆ ಘಟನೆಯ ಬಗ್ಗೆ ಯಾವುದೇ ಮಾಹಿತಿಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ಚಾಸಾ-1 ನನ್ನ ಅಣ್ಣನ ಮಗನಾಗಿರುವುದರಿಂದ ನನಗೆ ಘಟನೆ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ಆತನಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.